ಫೀ ಹೆಚ್ಚಿಗೆ ಆಯಿತು, ಅದನ್ನು ಕೊಡಲು ಆಗುವುದಿಲ್ಲ ಎಂದು ಕೆಲವರು ಕೋರ್ಟಿಗೆ ಹೋಗಿದ್ದಾರೆ. ಇನ್ನು ಕೆಲವರು, ನಾವು ನಮ್ಮ ವಿದ್ಯಾರ್ಥಿಗಳನ್ನು 3 ತಿಂಗಳು ಮಾತ್ರ ನಿಮ್ಮ ಆಸ್ಪತ್ರೆಗೆ ಕಳುಹಿಸುತ್ತೇವೆ, ಇನ್ನುಳಿದ 9 ತಿಂಗಳು ನಮ್ಮ ಆಸ್ಪತ್ರೆಯಲ್ಲೇ ಸೌಲಭ್ಯ ಪಡೆಯುವುದರಿಂದ ಒಂದು ವರ್ಷದ ಫೀಸನ್ನು ಕಟ್ಟಲು ಆಗುವುದಿಲ್ಲ ಎಂದು ವಾದ ಮಾಡುತ್ತಿದ್ದಾರೆ. ಆದರೆ, ವಿದ್ಯಾರ್ಥಿಗಳನ್ನು ಒಂದು ತಿಂಗಳು ಕಳುಹಿಸಿ, ಮೂರು ತಿಂಗಳು ಕಳುಹಿಸಿ,ಅಥವಾ ಒಂದು ವರ್ಷ ಕಳುಹಿಸಿ, ಆದರೆ ಒಂದು ವರ್ಷದ ಫೀಸನ್ನು ತಾವು ಕೊಡಬೇಕಾಗುತ್ತದೆ ಎಂದು ನಾವು ಹೇಳಿದ್ದೇವೆ. ಆದಷ್ಟು ಬೇಗನೆ, ನ್ಯಾಯಾಲಯಕ್ಕೆ ಹೋಗದೇ ಇರುವಂಥ ಕಾಲೇಜುಗಳಿಂದ ಅದನ್ನು ವಸೂಲು ಮಾಡಿ ಅದನ್ನು ಸರಿಯಾಗಿ ವಿನಿಯೋಗ ಮಾಡುತ್ತೇವೆ ಎಂದು ನಾನು ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ.

ಶ್ರೀ ಕೆ. ವಿರೂಪಾಕ್ಷಪ್ಪ : ಸರ್ಕಾರಿ ಕಾಲೇಜುಗಳಲ್ಲಿ ಸೌಲಭ್ಯದ ಕೊರತೆ ಇದೆಯೇ ಎನ್ನುವುದಕ್ಕೆ ತಾವು ಉತ್ತರ ಕೊಡಲಿಲ್ಲ.

ಡಾ॥ ಎಂ. ಶಂಕರನಾಯಕ್ : ಸರ್ಕಾರಿ ಕಾಲೇಜುಗಳಲ್ಲಿ ಸಧ್ಯಕ್ಕೆ ಯಾವುದೇ ಸೌಲಭ್ಯಗಳ ಕೊರತೆಯಿಲ್ಲ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಕೊಟ್ಟಿರುವ ನಿರ್ದೇಶನದಂತೆ ಯಾವ ಯಾವ ಉಪಕರಣಗಳು ಬೇಕು, ಲೈಬ್ರರಿ ಬೇಕು, ಲೈಬ್ರರಿಯಲ್ಲಿ ಪುಸ್ತಕಗಳು ಎಷ್ಟು ಬೇಕು, ಹಾಸ್ಪೆಲ್ ಈ ರೀತಿಯವುಗಳನ್ನು ನಾವು ಶೇ. 90-95 ರಷ್ಟು ಮಾಡಿದ್ದೇವೆ. ಅವರು ಈಗಾಗಲೇ ಬಂದು ಇನ್ಸ್‌ಪೆಕ್ಟ್ ಮಾಡಿಕೊಂಡು ಹೋಗಿದ್ದಾರೆ. ನಾವು ಅವರ ವರದಿಯ ನಿರೀಕ್ಷಣೆಯಲ್ಲಿದ್ದೇವೆ. ಬಹಳಷ್ಟು ಸೌಲಭ್ಯಗಳನ್ನು ನಾವು ಈಗಾಗಲೇ ಒದಗಿಸಿಕೊಟ್ಟಿದ್ದೇವೆ.

ವಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯಗಳು

215 (1483)

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ಶ್ರೀ ಕೋಟ) :

ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ವಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಆಲ್-ಅಮೀನ್ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ವಿದ್ಯಾರ್ಥಿಗಳಿಂದ ಈವರೆಗೆ ವಸೂಲಿ ಮಾಡಿದ ಶುಲ್ಕದ ಮೊತ್ತ ಎಷ್ಟು?

ಇ) ಸದರಿ ಹಣವನ್ನು ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿಗಾಗಿ ಜಿಲ್ಲಾ ಶಸ್ತ್ರ ಚಿಕಿತ್ಸಕರು ವಿನಿಯೋಗ ಮಾಡಲು ಕೇಳಿರುವುದು ನಿಜವೇ?

ಈ) ಹಾಗಿದ್ದಲ್ಲಿ ಆ ಬಗ್ಗೆ ಇಲ್ಲಿಯವರೆಗೆ ಮಂಜೂರಾತಿ ನೀಡದಿರಲು ಕಾರಣವೇನು?

ಡಾ॥ ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು

ಆ) 42,00,000-00 ರೂ. ಗಳು

ಇ) ಹೌದು

ಈ) ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿಗಾಗಿ ಕ್ಲಿನಿಕಲ್ ಶುಲ್ಕದ ಹಣ ಉಪಯೋಗಿಸುವ ಬಗ್ಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಈ ಸಮಿತಿಯು ಜಿಲ್ಲಾ ಶಸ್ತ್ರ ಚಿಕಿತ್ಸಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು:

ಶ್ರೀ ಶಿವಾನಂದ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು, ವೈದ್ಯಕೀಯ ಶಿಕ್ಷಣ ನಿರ್ದೇಶಕರ ಅನುಮೋದನೆಗೆ ಒಳಪಟ್ಟು, ಹಣವನ್ನು ಖರ್ಚು ಮಾಡಲು ಪರವಾನಗಿಯನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. 1986ರಲ್ಲಿ ಬಿಜಾಪುರದಲ್ಲಿ ಆಲ್ ಅಮೀನ್ ಕಾಲೇಜು ಪ್ರಾರಂಭವಾಗಿದೆ. ಇಲ್ಲಿಯವರೆಗೆ ಸುಮಾರು 55-60 ಲಕ್ಷ ರೂಪಾಯಿಗಳ ವೈದ್ಯಕೀಯ ಶಿಕ್ಷಣ ಫೀಸನ್ನು ಅವರು ಜಿಲ್ಲಾ ಆಸ್ಪತ್ರೆಗೆ ಜಮಾ ಮಾಡಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಅವರು ನಿಮ್ಮ ಪರ್ಮಿಷನ್ ಕೇಳುತ್ತಿದ್ದಾರೆ. ಸರ್ಕಾರದಿಂದ ಹಣ ಬರುತ್ತಿಲ್ಲ, ಆದ್ದರಿಂದ ನಮ್ಮಲ್ಲಿರುವಂಥ ಹಣವನ್ನಾದರೂ ಡಿಸ್ಪೆನ್ಸರಿಗಾಗಲೀ ಜನರೇಟರ್‌ಗಾಗಲೀ ಅಥವಾ ಅಲ್ಲಿ ಏನೇನು ಸೌಲಭ್ಯಗಳ ಕೊರತೆ ಇದೆ ಅದಕ್ಕೆ ಉಪಯೋಗಿಸಲು ಪರವಾನಗಿಯನ್ನು ಕೊಡಿ ಎಂದು ಕೇಳುತ್ತಿದ್ದಾರೆ. 1986 ರಿಂದ ಇಲ್ಲಿಯವರೆಗೆ ನಿಮ್ಮ ನಿರ್ದೇಶಕರು ಆ ಕಡೆ ತಿರುಗಿಯೂ ಕೂಡ ನೋಡಿಲ್ಲ. ಆ ಬಗ್ಗೆ ಡಿಸ್ಟ್ರಿಕ್ಟ್ ಸರ್ಜನ್ ರಿಪೋರ್ಟ್ ಕೂಡ ನನ್ನಲ್ಲಿ ಇದೆ. 1986 ರಿಂದ ಅವರು ಸತತವಾಗಿ ಬರೆಯುತ್ತಿದ್ದಾರೆ. ಅವರಲ್ಲಿರುವಂಥ ಹಣವನ್ನು ವಿನಿಯೋಗ ಮಾಡಿಕೊಳ್ಳಲು ಒಂದು ಪರವಾನಗಿಯನ್ನು ಇವತ್ತಿನವರೆಗೂ ಕೊಡಲು ಆಗಲಿಲ್ಲವೆಂದರೆ ನಿಮ್ಮ ನಿರ್ದೇಶಕರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆನ್ನುವುದು ನನಗೆ ತಿಳಿಯುತ್ತಿಲ್ಲ. ದಯಮಾಡಿ ಈಗಲಾದರೂ ಇದನ್ನು ಗಣನೆಗೆ ತೆಗೆದುಕೊಂಡು ಪರವಾನಗಿಯನ್ನು ಕೊಡಬೇಕು. ಅಲ್ಲಿ 42 ಲಕ್ಷ ರೂಪಾಯಿ ಇದೆ ಎಂದು ತಾವೇ ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಆದರೆ ಸರ್ಕಾರದಿಂದ ಈ ಸೌಲಭ್ಯವನ್ನು ಕೊಡಲು ಕೆ.ಹೆಚ್.ಎಸ್.ಡಿ.ಪಿ.ಯಲ್ಲಿ ಈ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ಸಚಿವರು ಹೇಳುತ್ತಿದ್ದಾರೆ. ಆದರೆ ಇದುವರೆಗೆ ಆ ಯೋಜನೆ ಕೂಡ ಕಾರ್ಯಾರಂಭವಾಗಿಲ್ಲ. ಆದ್ದರಿಂದ ಅವರಲ್ಲಿರುವ ಹಣವನ್ನು ಉಪಯೋಗಿಸಿಕೊಳ್ಳಲು ತಾವು ಈಗಲಾದರೂ ಪರವಾನಗಿಯನ್ನು ಕೊಟ್ಟು ಅವರು ಹಣವನ್ನು ಖರ್ಚು ಮಾಡಲು ಅವಕಾಶ ಕಲ್ಪಿಸಿ ಕೊಡಬೇಕು ಎಂದು ತಮ್ಮ ಮೂಲಕ ಅವರನ್ನು ಕೇಳಲು ನಾನು ಇಚ್ಛಿಪಡುತ್ತಿದ್ದೇನೆ.

ಡಾ|| ಎಂ. ಶಂಕರ್‌ನಾಯಕ್ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದಂತೆ ಅಲ್ಲಿ 60 ಲಕ್ಷಕ್ಕೂ ಹೆಚ್ಚು ಹಣ ಇತ್ತು. ಅವರಿಗೆ ಬೇಕಾದಂಥ ಎಕ್ವಿಪ್‌ಮೆಂಟ್‌ಗಳನ್ನು ನಾವು ಕೊಟ್ಟಿದ್ದೇವೆ. ಕ್ಲಿನಿಕಲ್ ಸೌಲಭ್ಯದಿಂದ ಬಂದಿರುವಂಥ ಹಣವನ್ನು ಬರೀ ಎಕ್ವಿಪ್‌ಮೆಂಟ್‌ಗಳಿಗಾಗಿ ಖರ್ಚು ಮಾಡಬೇಕೆಂದು ಖಾಸಗೀ ಕಾಲೇಜುಗಳ ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕರು ಹೇಳುತ್ತಾರೆ. ಇವರು ಕೇಳಿರುವ ಜನರೇಟರ್ ಮತ್ತಿತರೆ ವಸ್ತುಗಳನ್ನು ನಾವು ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಸಪ್ಲೈ ಮಾಡುತ್ತೇವೆ ಎಂದು ಹೇಳಿರುವುದರಿಂದ, ಅದು ಮಾಡದೇ ಇದ್ದ ಸಂದರ್ಭದಲ್ಲಿ ಇದನ್ನು ಮಾಡೋಣ. ಡೂಪ್ಲಿಕೇಷನ್ ಆಗಬಾರದು ಎನ್ನುವ ಉದ್ದೇಶದಿಂದ ಅದನ್ನು ಹಾಗೇ ಇಟ್ಟಿದ್ದೇವೆ. ಆ 42 ಲಕ್ಷ ರೂ.ಗಳಲ್ಲಿ

ಯಾವ್ಯಾವ ಎಕ್ವಿಪ್‌ಮೆಂಟ್‌ಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಅಪ್ರೂವ್ ಆಗಿದೆ, ಇಷ್ಟರಲ್ಲೇ ಅದು ಸರಬರಾಜು ಆಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅವರು ಕಳೆದ ನಾಲ್ಕು ವರ್ಷಗಳಿಂದ ಪರವಾನಗಿಯನ್ನು ಕೇಳುತ್ತಿದ್ದಾರೆ. ನೀವು ಕೆ.ಹೆಚ್.ಎಸ್.ಡಿ.ಪಿ. ಯೋಜನೆಯಲ್ಲಿ ಕೊಡುತ್ತೇವೆ ಎಂದು ಹೇಳುತ್ತಿರುವುದು ಕಳೆದ ಒಂದೆರಡು ವರ್ಷದಿಂದ. ನಿಮಗೆ ಗೊತ್ತಿದೆ, ಕಳೆದ ನಾಲ್ಕು ವರ್ಷಗಳಿಂದ ಎಷ್ಟು ಪವರ್ ಕಟ್ ಬಿಜಾಪುರ ಜಿಲ್ಲೆಯಲ್ಲಿದೆ ಎಂದು. ನಿಮಗೆ ಇನ್ನೂ ಹೇಳಬೇಕಾದರೆ ಆಪರೇಷನ್ ಥಿಯೇಟರ್‌ನಲ್ಲಿಯೂ ಲೈಟ್ ಇರುವುದಿಲ್ಲ. ಅದನ್ನಾದರೂ ನೀವು ಗಣನೆಗೆ ತೆಗೆದುಕೊಂಡು ಪ್ಯೆಯಾರಿಟಿ ಎಂದು ಟ್ರೀಟ್ ಮಾಡಿ ಕೊಡಿ. ಏಕೆಂದರೆ ಅದು ಸುಮ್ಮನೆ ಕುದುರೆಗೆ ನೀರು ತೋರಿಸಿದ ಹಾಗೆ ಆಗಬಾರದು. ಏಕೆಂದರೆ ಕೆ.ಹೆಚ್.ಎಸ್.ಡಿ.ಪಿ.ಯ ಹೆಸರು ಹೇಳುತ್ತಾ ನಾವು ಎರಡು ವರ್ಷದಿಂದ ಸುಮ್ಮನೆ ಕಾಲಹರಣ ಮಾಡಿದ್ದೇವೆ. ಆದ್ದರಿಂದ ಅವರಲ್ಲಿರುವ ಹಣವನ್ನು ವಿನಿಯೋಗ ಮಾಡಲು ಪರವಾನಗಿ ನೀಡಿದರೆ ಅದು ಡೂಪ್ಲಿಕೇಷನ್ ಆಫ್ ವರ್ಕ್ಸ್ ಆಗುವುದಿಲ್ಲ. ನಾಲ್ಕು ವರ್ಷದಿಂದ ಅವರು ಅದನ್ನು ಕೇಳುತ್ತಿದ್ದಾರೆ. ಕನಿಷ್ಟ ಅದಕ್ಕಾದರೂ ಅವಕಾಶ ಕೊಡಿ.

ಡಾ|| ಎಂ. ಶಂಕರ್‌ನಾಯಕ್ : ಆಪರೇಷನ್ ಥಿಯೇಟರ್‌ನಲ್ಲಿ ಈಗಾಗಲೇ ಜನರೇಟರ್ ಇದೆ. ಅವರು ಕೇಳುತ್ತಿರತಕ್ಕಂಥಾದ್ದು ಪೂರ್ತಿ ಆಸ್ಪತ್ರೆಗೆ ಬೇಕಾದಂಥಾದ್ದು. ಕೆ.ಹೆಚ್.ಎಸ್.ಡಿ.ಪಿ.ಯಲ್ಲಿ ಬರದಿದ್ದರೆ ನಾವು ಅವಕಾಶ ಮಾಡಿಕೊಡುತ್ತೇವೆ.

ಸಂತೇಮಾರನಹಳ್ಳಿ ಕ್ಷೇತ್ರದ ಗ್ರಾಮಗಳಿಗೆ ಗ್ರಂಥಾಲಯಗಳ ಮಂಜೂರಾತಿ

218 (1450)

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :

ಮಾನ್ಯ ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಚಾಮರಾಜನಗರ ಜಿಲ್ಲೆಯಲ್ಲಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು?

ಆ) ಸಂತೇಮಾರನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗ್ರಂಥಾಲಯ ಸಂಖ್ಯೆ ಎಷ್ಟು? ಅವು ಯಾವ ಯಾವ ಗ್ರಾಮಗಳಲ್ಲಿ ಮಂಜೂರಾಗಿವೆ. (ವಿವರ ನೀಡುವುದು)

ಇ) ಸಂತೇಮಾರನಹಳ್ಳಿ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಿಗೆ ಹೊಸದಾಗಿ ಗ್ರಂಥಾಲಯ ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ. (ವಿವರ ನೀಡುವುದು)

ಈ) ಹಾಗಿದ್ದಲ್ಲಿ, ಆ ಬಗ್ಗೆ ಮಂಜೂರಾತಿಯನ್ನು ಯಾವಾಗ ನೀಡಲಾಗುವುದು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು) :

ಅ) 27

ಆ) 07

1. ಸಂತೇಮಾರನಹಳ್ಳಿ ಗ್ರಾಮ ಪಂಚಾಯ್ತಿ ಗ್ರಂಥಾಲಯ, ಚಾಮರಾಜನಗರ ತಾಲ್ಲೂಕು